ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 07-12-2020 ರಂದು ನಡೆದ ವಾರ್ಡ್ ಸಂಖ್ಯೆ: 114 ಅಗರಂ ವಾರ್ಡಿನ ವಾರ್ಡ್ ಸಮಿತಿ ಸಭೆಯ ನಡಾವಳಿಗಳು**

ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)ಪಿಆರ್/35/2020-21, ದಿನಾಂಕ: 21-09-2020 ರ ಆದೇಶದಂತೆ ದಿನಾಂಕ: 07-12-2020 ರಂದು ವಾರ್ಡ್ ಸಂಖ್ಯೆ: 114 ಅಗರಂ ವಾರ್ಡ್‌ನಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.

**ಸಭೆಗೆ ಹಾಜರಿದ್ದವರ ವಿವರಗಳು**

| ಸನ್ಮಾನ್ಯ ಶ್ರೀ. ಎನ್. ಎ. ಹ್ಯಾರೀಸ್ | | ಮಾನ್ಯ ಶಾಸಕರು, ಶಾಂತಿನಗರ ವಿಧಾನ ಸಭಾ ಕ್ಷೇತ್ರ |
|---|---|---|
| ಕ್ರ.ಸಂ | ಅಧಿಕಾರಿಗಳ ಹೆಸರು | ಪದನಾಮ |
| 1 | ಶ್ರೀ. ಅವಿನಾಶ್ ಬಾಬು | ಅಧ್ಯಕ್ಷಕರು ಮತ್ತು ನೋಡಲ್ ಅಧಿಕಾರಿಗಳು |
| 2 | ಶ್ರೀ. ಅಪ್ಪುರಾಜ್ | ಸಹಾಯಕ ಕಾರ್ಯಪಾಲಕ ಅಭಿಯಂತರರ, ಘನತ್ಯಾಜ್ಯ ನಿರ್ವಹಣೆ ಶಾಂತಿನಗರ ವಿಭಾಗ |
| 3 | ಶ್ರೀ ಚಂದ್ರಪ್ಪ ಕೆ ಬಿ | ಸಹಾಯಕ ಕಂದಾಯ ಅಧಿಕಾರಿಗಳು, ದೊಮ್ಮಲೂರು ಉಪ ವಿಭಾಗ ಮತ್ತು ಸಮಿತಿ ಸದಸ್ಯರು |
| 4 | ಶ್ರೀ ಟಿ.ಎಸ್. ನಾಗಪ್ಪ | ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ |
| 5 | ಶ್ರೀ ಸುರೇಶ್ | ಕಂದಾಯ ಪರಿವೀಕ್ಷಕರು ವಾರ್ಡ್ ಸಂಖ್ಯೆ: 114 |
| 6 | ಶ್ರೀ ಕೆ ಎಸ್ ಚಿದಾನಂದ | ಕಿರಿಯ ಆರೋಗ್ಯ ಪರಿವೀಕ್ಷಕರು & ಸಮಿತಿ ಸದಸ್ಯರು ವಾರ್ಡ್ ಸಂಖ್ಯೆ: 114 |
| 7 | ಶ್ರೀಮತಿ. ಶೈಲಜ ಬಿ | ಸಹಾಯಕ ಕಂದಾಯ ಅಧಿಕಾರಿಗಳು (ಕಲ್ಯಾಣ) |
| 8 | ಶ್ರೀ. ಬಿ.ಸಿ. ಪ್ರಭು | ಕೆಲಸ ಪರಿವೀಕ್ಷಕರು, ವಾರ್ಡ್ ಸಂಖ್ಯೆ: 114 |
| 9 | ಶ್ರೀ. ಎಲ್. ಸಗಾಯನಾಥನ್ | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ: 114 |
| 10 | ಡಾ॥ ಚಿತ್ರ | ಆರೋಗ್ಯಾಧಿಕಾರಿಗಳು |
| 11 | ದೇವರಾಜ್ | ಅರಣ್ಯ ಇಲಾಖೆ, ಬಿಬಿಎಂಪಿ |
| 12 | ಶ್ರೀಮತಿ. ಶ್ರೀಮತಿ. ಎಂ.ಸಿ | ಟೈಲರಿಂಗ್ ಇನ್ಸ್ಟ್ರಕ್ಟರ್ ವಾರ್ಡ್ ಸಂಖ್ಯೆ: 114 |
| 13 | ಶ್ರೀ. ಶ್ರೀನಿವಾಸ್ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ |
| 14 | ಶ್ರೀಮತಿ. ಮೀನಾಕ್ಷಿ | ಇನ್ಸ್‌ಪೆಕ್ಟರ್, ವಿವೇಕನಗರ ಸಂಚಾರಿ ಪೋಲೀಸ್ ಠಾಣೆ |
| 15 | ಶಿಲ್ಪ. ಎನ್ | ಸಹಾಯಕ ಅಭಿಯಂತರರು ಬೃಹತ್ ನೀರುಗಾಲುವೆ |
| 16 | ರುದ್ರಮುನಿ | ಸಹಾಯಕ ಅಭಿಯಂತರರು, ಬೆಸ್ಕಾಂ |
| 17 | ಅಜಯ್ ಎನ್ | ಸಹಾಯಕ ಅಭಿಯಂತರರು, ಬೆಸ್ಕಾಂ |
| 18 | ಕೆ ಶ್ರೀನಿವಾಸ್ | ಸಹಾಯಕ ಅಭಿಯಂತರರು, ಬೆಸ್ಕಾಂ |
| 19 | ರಾಜಶೇಖರ್ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ |
| 20 | ಟಿ.ಡಿ. ಮಂಜುನಾಥ | ಸಹಾಯಕ ಕಾರ್ಯಪಾಲಕ ಅಭಿಯಂತರರು, ದೊಮ್ಮಲೂರು ಉಪ ವಿಭಾಗ, ಬಿಬಿಎಂಪಿ |



Scanned by TapScanner

| | | |
|---|---|---|
| 21 | ಆರ್ ಮಧು | ಕಾರ್ಯಪಾಲಕ ಅಭಿಯಂತರರು,<br>ಶಾಂತಿನಗರ ವಿಭಾಗ, ಬಿಬಿಎಂಪಿ |
| **ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ವಿವರ** | | |
| 22 | ರಾಧ | ವಾರ್ಡ್ ಸಮಿತಿ ಸದಸ್ಯರು |
| 23 | ಭವಾನಿ | ವಾರ್ಡ್ ಸಮಿತಿ ಸದಸ್ಯರು |
| 24 | ವಸಂತ | ವಾರ್ಡ್ ಸಮಿತಿ ಸದಸ್ಯರು |
| 25 | ಪುರುಷೋತ್ತಮ | ವಾರ್ಡ್ ಸಮಿತಿ ಸದಸ್ಯರು |
| 26 | ಸರವಣ | ವಾರ್ಡ್ ಸಮಿತಿ ಸದಸ್ಯರು |
| 27 | ನಂಧ ಪಿ.ಕೆ | ವಾರ್ಡ್ ಸಮಿತಿ ಸದಸ್ಯರು |
| 28 | ರಾಜಕುಟ್ಟಿ | ವಾರ್ಡ್ ಸಮಿತಿ ಸದಸ್ಯರು |
| 29 | ಗೀತ ಶ್ರೀನಿವಾಸ್ | ವಾರ್ಡ್ ಸಮಿತಿ ಸದಸ್ಯರು<br>(ಜೀವನಕೇಂದ್ರ ಬಡಾವಣೆ ಅಸೋಸಿಯೇಷನ್) |

ದಿನಾಂಕ: 07-12-2020 ರಂದು ಸಂಜೆ 6-00 ಗಂಟೆಗೆ ವಾರ್ಡ್ ಸಂಖ್ಯೆ: 114 ಅಗರಂ ವಾರ್ಡ್ ವ್ಯಾಪ್ತಿಯ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಎಂ.ಜಿ. ರಸ್ತೆಯಲ್ಲಿರುವ ನೇತಾಜಿ ಸುಭಾಷ್ ಚಂದ್ರಬೋಸ್ ಕಟ್ಟಡದಲ್ಲಿ ನಡೆಸಲಾಯಿತು.

ಸಭೆಯ ಆರಂಭದಲ್ಲಿ ನೋಡಲ್ ಅಧಿಕಾರಿಯವರನ್ನು ಹಾಗೂ ಸಭೆಗೆ ಆಗಮಿಸಿದ ಸನ್ಮಾನ್ಯ ಶ್ರೀ. ಎನ್. ಎ. ಹ್ಯಾರೀಸ್, ಮಾನ್ಯ ಶಾಸಕರು ಶಾಂತಿನರ ವಿಧಾನ ಸಭಾ ಕ್ಷೇತ್ರ ರವರನ್ನು ವಾರ್ಡ್ ಸಮಿತಿ ಸದಸ್ಯರನ್ನು ವಿವಿಧ ಇಲಾಖೆಯಿಂದ ಆಗಮಿಸಿದ್ದ ಅಧಿಕಾರಿಗಳನ್ನು ಮತ್ತು ಸಾರ್ವಜನಿಕರನ್ನು ವಾರ್ಡ್ ಸಮಿತಿಯ ಕಾರ್ಯದರ್ಶಿಯವರು ಸ್ವಾಗತವನ್ನು ಕೋರಿದರು.

**ದಿನಾಂಕ: 26-11-2020 ರ ಸಭೆಯಲ್ಲಿ ಸಾರ್ವಜನಿಕರು ತಿಳಿಸಿದ ಸಮಸ್ಯೆಗಳನ್ನು ಪರಿಹರಿಸಲು ಕೈಗೊಂಡ ಕ್ರಮಗಳ ವಿವರ:**

| ಕ್ರ.ಸಂ | ಸಮಸ್ಯೆ | ಕೈಗೊಂಡ ಕ್ರಮ |
|---|---|---|
| 1 | ಜೀವನ್ ಕೇಂದ್ರ ಬಡಾವಣೆಯಲ್ಲಿರುವ ಬೋರ್‌ವೆಲ್‌ಗೆ ವಿದ್ಯುತ್ ಸಂಪರ್ಕ ಒದಗಿಸುವ ಬಗ್ಗೆ. | ಬಿಬಿಎಂಪಿ ವತಿಯಿಂದ ಬೋರ್‌ವೆಲ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಪತ್ರ ಕೊಡಲಾಗಿದೆ. |
| 2 | ಅಂಬೇಡ್ಕರ್ ಭವನದ ವಿದ್ಯುತ್ ಬಿಲ್ಲನ್ನು ಪಾವತಿಸುವ ಬಗ್ಗೆ. | ಬೆಸ್ಕಾಂ ಇಲಾಖೆಯಿಂದ ತಾತ್ಕಾಲಿಕ ವಿದ್ಯುತ್ ಸಂಪರ್ಕ ಕಲ್ಪಿಸಿದೆ, ಬಿಲ್ಲಿನ ಮೊತ್ತವನ್ನು ಪಾವತಿ ಮಾಡಬೇಕಿದೆ. |
| 3 | ಗೌತಮ್‌ಪುರ ಸಮುದಾಯ ಭವನ ನವೀಕರಣಗೊಳಿಸುವ ಬಗ್ಗೆ. | ಸಮುದಾಯ ಭವನ ನವೀಕರಣ ಕಾಮಗರಿಯನ್ನು ಲಭ್ಯ ಅನುದಾನದಲ್ಲಿ ನಿರ್ವಹಿಸಲು ಅಗತ್ಯ ಕ್ರಮಕೈಗೊಳ್ಳಲಾಗುವುದು. |
| 4 | ವಾರ್ಡ್‌ನಲ್ಲಿ ಮರಗಳ ಟ್ರಿಮ್ಮಿಂಗ್ ಮಾಡುವ ಕುರಿತು. | ಪಾಲಿಕೆಯ ಅರಣ್ಯ ಇಲಾಖೆಗ ತಿಳಿಸಲಾಗಿದೆ, ಆದರೆ ಇದುವರೆಗೂ ಯಾವುದೇ ಕ್ರಮಕೈಗೊಂಡಿರುವುದಿಲ್ಲ. |
| 5 | ಆರ್ಚಲರಿ ರಸ್ತೆ, ದೀನಬಂಧುನಗರ ಇಲ್ಲಿ ಮಳೆಯಿಂದ ನೀರು ಕೆಳ ಮಟ್ಟದಲ್ಲಿನ ಮನೆಗಳಿಗೆ ನುಗ್ಗುತ್ತಿರುವ ಬಗ್ಗೆ. | ರಸ್ತೆಯಲ್ಲಿ ಸಂಗ್ರಹಗೊಂಡಿದ್ದ ಡೆಬ್ರಿಸ್‌ನ್ನು ತೆರವುಗೊಳಿಸಲಾಗಿದ, ಮತ್ತು ಮಳೆ ನೀರು ಮನೆಗಳಿಗೆ ನುಗ್ಗದಂತೆ ರಸ್ತೆ ಪಕ್ಕದಲ್ಲಿ ಕಾಂಕ್ರೀಟ್‌ನಲ್ಲಿ ಉಬ್ಬು ನಿರ್ಮಿಸುವ ಕಾಮಗಾರಿ ಪ್ರಗತಿಯಲ್ಲಿದೆ. |
| 6 | ಕೆ.ಬಿ.ಆರ್. ರಸ್ತೆಯಲ್ಲಿ ಸಿ.ಸಿ. ಕ್ಯಾಮರಾ ಅಳವಡಿಸುವ ಬಗ್ಗೆ. | ಮಾನ್ಯ ಶಾಸಕರ ಅನುದಾನದಡಿಯಲ್ಲಿ ಕೆ.ಬಿ.ಆರ್.ರಸ್ತೆಯಲ್ಲಿ ಸಿ.ಸಿ. ಕ್ಯಾಮರಾ ಅಳವಡಿಸಲಾಗಿದೆ. |
| 7 | ಜಸ್ಮಾ ಭವನದವರು ಫುಟ್‌ಪಾತ್ ಮೇಲೆ ಟ್ರಾನ್ಸ್‌ಫಾರ್ಮರ್ ಅಳವಡಿಸಿರುವ ಕುರಿತು. | ಜಸ್ಮಾ ಭವನದ ಮಾಲೀಕರಿಗೆ ಬೆಸ್ಕಾಂ ಇಲಾಖೆಯಿಂದ ನೋಟೀಸ್ ಜಾರಿ ಮಾಡಲಾಗಿದ್ದು, ಕೂಡಲೇ ಫುಟ್‌ಪಾತ್‌ನಲ್ಲಿರುವ ಟ್ರಾನ್ಸ್‌ಫಾರ್ಮರ್‌ನ್ನು ತೆರವುಗೊಳಿಸಲು ಕ್ರಮಕೈಗೊಳ್ಳಲಾಗುವುದು. |



Scanned by TapScanner

| | | |
|---|---|---|
| 8 | ಕೆ.ಜಿ.ಆರ್. ರಸ್ತೆಯ ರಾಜರಾಜೇಶ್ವರ ದೇವಸ್ಥಾನದ ಹತ್ತಿರ ನೀರು ಪೈಪುಗಳಿಂದ ಸೋರುತ್ತಿರುವ ಬಗ್ಗೆ. | ಬಿ.ಡಬ್ಲ್ಯು.ಎಸ್.ಎಸ್.ಬಿ. ಇಲಾಖೆಯಿಂದ ಸಮಸ್ಯೆ ಪರಿಹರಿಸಲಾಗಿದೆ. |
| 9 | ಬಿ.ಡಿ.ಎ. ಕಾಂಪ್ಲೆಕ್ಸ್ ವಾಟರ್ ಟ್ಯಾಂಕ್ ರಸ್ತೆಯಲ್ಲಿ ಅನಧಿಕೃತವಾಗಿ ವಾಹನಗಳನ್ನು ಪಾರ್ಕಿಂಗ್ ಮಾಡಿರುವ ಬಗ್ಗೆ. | ಸಂಚಲಿ ಪೋಲೀಸ್ ಇಲಾಖೆಯವರು ಯಾವುದೇ ಕ್ರಮಕೈಗೊಂಡಿರುವುದಿಲ್ಲ. |
| 10 | ಓ.ಆರ್.ಸಿ. ರಸ್ತೆಯ ಡ್ರೈನ್ ಕ್ಲೀನ್ ಮಾಡುವ ಬಗ್ಗೆ. | ಪಾಲಿಕೆಯ ಕಾಮಗಾರಿ ವಿಭಾಗದಿಂದ ಡ್ರೈನ್ ಕ್ಲೀನ್ ಮಾಡಲಾಗಿದೆ. |
| 11 | ರುದ್ರಪ್ಪ ಗಾರ್ಡನ್‌ನಲ್ಲಿ ಹಳೆಯ ವಿದ್ಯುತ್ ಕಂಬಗಳನ್ನು ತೆರವು ಮಾಡುವ ಬಗ್ಗೆ. | ಹಳೆಯ ಕಂಬಗಳನ್ನು ತೆರವು ಮಾಡುವ ಕಾರ್ಯವು ಪ್ರಗತಿಯಲ್ಲಿರುತ್ತದೆ. |
| 12 | ಮಾಯಾ ಬಜಾರ್ ಶೌಚಾಲಯ ಶುಚಿತ್ವಗೊಳಿಸುವ ಬಗ್ಗೆ. | ಪಾಲಿಕೆಯ ಘನತ್ಯಾಜ್ಯ ನಿರ್ವಹಣೆಯ ವಿಭಾಗದಿಂದ ಶೌಚಾಲಯವನ್ನು ಶುಚಿಗೊಳಿಸಲಾಗಿದೆ. |

**ಇಂದು ನಡೆದ ಸಭೆಯಲ್ಲಿ ಪ್ರಮುಖವಾಗಿ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.**

1. 3ನೇ ಅಡ್ಡರಸ್ತೆಯಲ್ಲಿ ಡ್ರೈನೇಜ್ ಪೈಪ್ ಇಲ್ಲದಿರುವ ಬಗ್ಗೆ
2. ರಾಜಗೋಪಾಲ್ ಮೊಲಿಯಾರ್ ಸ್ಟ್ರೀಟ್, ಮೊದಲೇ ಸ್ಕ್ವೇರ್ ಮತ್ತು 5ನೇ ಸ್ಕ್ವೇರ್‌ನಲ್ಲಿ ಚರಂಡಿಗಳಲ್ಲಿ ಹೂಳು ತೆಗೆಯುವ ಬಗ್ಗೆ.
3. ದೀನಬಂಧುನಗರ ವ್ಯಾಪ್ತಿಯಲ್ಲಿ ಸ್ಯಾನಿಟರಿ ಸಮಸ್ಯೆ ಕುರಿತು.
4. ಹಕ್ಕು ಪತ್ರ ವಿತರಣೆಯ ಬಗ್ಗೆ.
5. ಸೇಂಟ್ ಮೇರಿ ಚರ್ಚ್ ಹತ್ತಿರ, ಪೀಲೆ ಪ್ರತಿಮೆ ಹತ್ತಿರ ಸಿಲ್ಟ್ ಮತ್ತು ಡೆಬ್ರಿಸ್ ತೆಗೆಯುವ ಬಗ್ಗೆ.
6. ಕೇಂಬ್ರಿಡ್ಜ್ ರಸ್ತೆಯಲ್ಲಿ ಬಿದ್ದಿರುವ ಮರವನ್ನು ತೆರವು ಮಾಡುವ ಬಗ್ಗೆ.
7. ವಾರ್ಡಿನಲ್ಲಿ ಸ್ಯಾನಿಟೈಸೇಷನ್ ಕಾರ್ಯನಿರ್ವಹಿಸುವ ಬಗ್ಗೆ.
8. ಮಾಯಾಬಜಾರ್ ಮತ್ತು ಅಯ್ಯಪ್ಪ ದೇವಸ್ಥಾನ ಬ್ಲಾಕ್ ಪ್ರದೇಶದಲ್ಲಿ ಹೊಸದಾಗಿ ಪೈಪ್‌ಲೈನ್ ಅಳವಡಿಸುವ ಬಗ್ಗೆ.
9. ಆರ್ಟಿಲರಿ ರಸ್ತೆಯಲ್ಲಿ ಬೀದಿ ದೀಪಗಳನ್ನು ಅಳವಡಿಸುವ ಬಗ್ಗೆ.

**ವಾರ್ಡ್ ಸಮಿತಿ ಸಭೆಯ ನಡಾವಳಿಗಳು**

| ಕ್ರ. ಸಂ | ಚರ್ಚಿಸಿದ ವಿಷಯಗಳು | ತೆಗೆದುಕೊಳ್ಳಬೇಕಾದ ಕ್ರಮ | ಕ್ರಮಕೈಗೊಳ್ಳಬೇಕಾ ಅಧಿಕಾರಿಗಳ ವಿವರ |
|---|---|---|---|
| 1 | ಶ್ರೀ ನಂದಕುಮಾರ್ ರವರು ಮಾತನಾಡಿ ಅಯ್ಯಪ್ಪ ಬ್ಲಾಕ್‌ನ 3ನೇ ಅಡ್ಡರಸ್ತೆಯಲ್ಲಿ ಡ್ರೈನೇಜ್ ಪೈಪ್ ಇಲ್ಲದಿರುವ ಬಗ್ಗೆ ಸಭೆಗೆ ತಿಳಿಸಿ, ಕೂಡಲೇ ಸಮಸ್ಯೆ ಪರಿಹರಿಸುವಂತೆ ಕೋರಿದರು. | ಈ ಬಗ್ಗೆ ಬಿ.ಡಬ್ಲ್ಯು.ಎಸ್.ಎಸ್.ಬಿ ಇಲಾಖೆಯ ಅಧಿಕಾರಿಗಳು ಮಾತನಾಡಿ, ಈ ರಸ್ತೆಯಲ್ಲಿ ಕೂಡಲೇ ಡ್ರೈನೇಜ್ ಪೈಪ್‌ಲೈನ್‌ಗಳನ್ನು ಅಳವಡಿಸಲು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು. | ಶ್ರೀನಿವಾಸ್,<br>ಸಹಾಯಕ ಕಾರ್ಯಪಾಲಕ ಅಭಿಯಂತರರು,<br>ಬಿ.ಡಬ್ಲ್ಯು.ಎಸ್.ಎಸ್.ಬಿ<br>9845444052 |
| 2 | ಶ್ರೀ. ರಾಜಕುಟ್ಟಿ ರವರು ಮಾತನಾಡಿ ರಾಜ್‌ಗೋಪಾಲ್ ಮೊದಲಿಯರ್ ಸ್ಟ್ರೀಟ್, 1ನೇ ಸ್ಕ್ವೇರ್ ಮತ್ತು 5ನೇ ಸ್ಕ್ವೇರ್ ಪ್ರದೇಗಳಲ್ಲಿ ರಸ್ತೆಗಳು ಬಹಳ ಹದಗೆಟ್ಟಿದ್ದು, ಕೂಡಲೇ ಸರಿಪಡಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಕೋರಿದರು. | ಈ ಬಗ್ಗೆ ಮಾತನಾಡಿದ ದೊಮ್ಮಲೂರು ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಸದರಿ ರಸ್ತೆಯ ಅಭಿವೃದ್ಧಿ ಕಾಮಗಾರಿಯನ್ನು ಈ ಸಾಲಿನ POW ಪಟ್ಟಿಯಲ್ಲಿ ಅಳವಡಿಸಿಕೊಂಡು ರಸ್ತೆ ಅಭಿವೃದ್ಧಿಪಡಿಸಲಾಗುವುದೆಂದು ಸಭೆಗೆ ತಿಳಿಸಿದರು. | ಶ್ರೀ. ಡಿ. ಮೂರ್ತಿ<br>ಸಹಾಯಕ ಇಂಜಿನಿಯರ್<br>ಬಿ.ಬಿ.ಎಂ.ಪಿ.<br>9448241607 |



Scanned by TapScanner

| | | | |
|---|---|---|---|
| 3 | ಶ್ರೀಮತಿ. ರಾಧ ರವರು ಮಾತನಾಡಿ ದೀನಬಂಧು ನಗರ ಪ್ರದೇಶದಲ್ಲಿ ಪ್ರತಿ ವಾರದಲ್ಲಿ ಒಮ್ಮೆ ಸ್ಯಾನಿಟರಿ ಪೈಪ್‌ಲೈನ್ ಬ್ಲಾಕ್ ಆಗುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿರುವುದಾಗಿ ತಿಳಿಸಿ ಸಮಸ್ಯೆ ಬಗೆಹರಿಸುವಂತೆ ಕೋರಿದರು. | ಬಿ.ಡಬ್ಲ್ಯು.ಎಸ್.ಎಸ್.ಬಿ ಇಲಾಖೆಯ ಅಧಿಕಾರಿಗಳಿಗೆ ಕೂಡಲೇ ಸ್ಥಳ ಪರಿಶೀಲನೆ ಮಾಡಿ, ಸಮಸ್ಯೆಯನು ಶಾಶ್ವತವಾಗಿ ಪರಿಹರಿಸುವಂತೆ ಮಾನ್ಯ ಶಾಸಕರು ಸೂಚನೆ ನೀಡದರು. | ಶ್ರೀ. ನಾಗರಾಜ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ 9845444049 |
| 4 | ಶ್ರೀಮತಿ. ರಾಧ ರವರು ಮಾತನಾಡಿ, ಪಾಲಿಕೆವತಿಯಿಂದ ವಾರ್ಡಿನಲ್ಲಿರುವ ಬಡವರಿಗೆ ಮನೆಗಳ ಹಕ್ಕು ಪತ್ರವನ್ನು ಇದುವರೆಗೂ ನೀಡಿರುವುದಿಲ್ಲವೆಂದು ಆರೋಪಿಸಿದರು. | ಮಾನ್ಯ ಶಾಸಕರು ಈ ಬಗ್ಗೆ ಕೂಡಲೇ ಕ್ರಮಕೈಗೊಂಡು ಹಕ್ಕು ಪತ್ರಗಳನ್ನು ವಿತರಿಸುವಂತೆ ಪಾಲಿಕೆಯ ಸಹಾಯಕ ಕಂದಾಯ ಅಧಿಕಾರಿಯವರಿಗೆ ಸೂಚನೆ ನೀಡಿದರು. | ಶ್ರೀ. ಚಂದ್ರಪ್ಪ ಸಹಾಯಕ ಕಂದಾಯ ಅಧಿಕಾರಿಗಳು ಬಿ.ಬಿ.ಎಂ.ಪಿ. 9632289839 |
| 5 | ಶ್ರೀಮತಿ. ಭವಾನಿ ರವರು ಮತ್ತು ಶ್ರೀ. ಶರವಣ ರವರುಗಳು ಅಗರಂ ವಾರ್ಡ್ ವ್ಯಾಪ್ತಿಯ ಸೇಂಟ್ ಮೇರೀಸ್ ಚರ್ಚ್ ಬಾಯ್ಸ್ ಸ್ಕೂಲ್ ಮತ್ತು ಪೀಲೆ ಪ್ರತಿಮೆ ಸುತ್ತಮುತ್ತಲ ಪ್ರದೇಶದಲ್ಲಿ ಡೆಬ್ರಿಸ್ ಹೆಚ್ಚಾಗಿದ್ದು, ಕೂಡಲೇ ತೆರವುಗೊಳಿಸಲು ಕೋರಿದರು. | ಈ ಬಗ್ಗೆ ಮಾತನಾಡಿದ ದೊಮ್ಮಲೂರು ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ವಾರ್ಡ್ ವ್ಯಾಪ್ತಿಯ ಎಲ್ಲಾ ಪ್ರದೇಶಗಳಲ್ಲಿಯೂ ಡೆಬ್ರಿಸ್ ತೆರವು ಮಾಡುವ ಕಾರ್ಯವು ಪ್ರಗತಿಯಲ್ಲಿದ್ದು, ಕೂಡಲೇ ಸೇಂಟ್ ಮೇರೀಸ್ ಚರ್ಚ್ ಬಾಯ್ಸ್ ಸ್ಕೂಲ್ ಮತ್ತು ಪೀಲೆ ಪ್ರತಿಮೆ ಸುತ್ತಮುತ್ತಲ ಪ್ರದೇಶದಲ್ಲಿರುವ ಡೆಬ್ರಿಸ್‌ನ್ನು ತೆರವುಗೊಳಿಸುವುದಾಗಿ ಸಭೆಗೆ ತಿಳಿಸಿದರು. | ಶ್ರೀ. ಡಿ. ಮೂರ್ತಿ ಸಹಾಯಕ ಇಂಜಿನಿಯರ್ ಬಿ.ಬಿ.ಎಂ.ಪಿ. 9448241607 |
| 6 | ಶ್ರೀ. ಶರವಣ ರವರು ಮಾತನಾಡಿ, ಕೇಂಬ್ರಿಡ್ಜ್ ರಸ್ತೆಯಲ್ಲಿ ಬಿದ್ದಿರುವ ಮರವನ್ನು ತೆರವು ಮಾಡುವಂತೆ ಕೋರಿದರು. | ಪಾಲಿಕೆಯ ಅರಣ್ಯ ಇಲಾಖೆಯ ಅಧಿಕಾರಿಗಳು ಸದರಿ ಮರವನ್ನು ಕೂಡಲೇ ತೆರವುಗೊಳಿಸಲು ಕ್ರಮಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು. | ಶ್ರೀ. ದೇವರಾಜ್ ಅರಣ್ಯ ಇಲಾಖೆ, ಬಿ.ಬಿ.ಎಂ.ಪಿ. 9741112446 |
| 7 | ಶ್ರೀ. ಪುರುಷೋತ್ತಮ ರವರು ಮಾತನಾಡಿ ವಾರ್ಡಿನಲ್ಲಿ ಕಾಲಕಾಲಕ್ಕೆ ಸ್ಯಾನಿಟೈಸೇಷನ್ ಮಾಡಿಸಲು ಕೋರಿದರು. | ಮಾನ್ಯ ಶಾಸಕರು ಪಾಲಿಕೆ ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಈ ಬಗ್ಗೆ ಕ್ರಮಕೈಗೊಂಡು ಕಾಲಕಾಲಕ್ಕೆ ವಾರ್ಡಿನಲ್ಲಿ ಸ್ಯಾನಿಟೈಸೇಷನ್ ನಿರ್ವಹಿಸಲು ಸೂಚಿಸಿದರು. | ಡಾ॥ ಸಂಘಮಿತ್ರ, ಉಪ ಆರೋಗ್ಯಾಧಿಕಾರಿಗಳು, ಬಿ.ಬಿ.ಎಂ.ಪಿ. 9343793046 |
| 8 | ಶ್ರೀ ಮುನಿಯಪ್ಪ ರವರು ಮಾತನಾಡಿ ವಾರ್ಡಿನ ಮಾಯಾಬಜಾರ್ ಮತ್ತು ಅಯ್ಯಪ್ಪ ದೇವಸ್ಥಾನ ಬ್ಲಾಕ್‌ಗಳಲ್ಲಿ ಹೊಸದಾಗಿ ಪೈಪ್‌ಲೈನ್ ಅಳವಡಿಸಲು ಮನವಿ ಮಾಡಿದರು. | ಮಾನ್ಯ ಶಾಸಕರು ಈ ಬಗ್ಗೆ ಕೂಡಲೇ ಕ್ರಮಕೈಗೊಂಡು ಸಾರ್ವಜನಿಕ ಹಿತದೃಷ್ಟಿಯಿಂದ ಕೂಡಲೇ ಮಾಯಾಬಜಾರ್ ಮತ್ತು ಅಯ್ಯಪ್ಪ ದೇವಸ್ಥಾನ ಬ್ಲಾಕ್‌ಗಳಲ್ಲಿ ಹೊಸದಾಗಿ ಪೈಪ್‌ಲೈನ್ ಅಳವಡಿಸುವಂತೆ ಬಿ.ಡಬ್ಲ್ಯು.ಎಸ್.ಎಸ.ಬಿ. ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು. | ಶ್ರೀನಿವಾಸ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ 9845444052 |
| 9 | ಶ್ರೀ ಮುನಿಯಪ್ಪ ರವರು ಮಾತನಾಡಿ ಅರ್ಚಲರಿ ರಸ್ತೆಯಲ್ಲಿ ಬೀದಿ ದೀಪಗಳು ಇಲ್ಲವೆಂದು ತಿಳಿಸಿ, ಕೂಡಲೇ ಹೊಸದಾಗಿ ಬೀದಿ ದೀಪಗಳನ್ನು ಅಳವಡಿಸುವಚಿತೆ ಮನವಿ ಮಾಡಿದರು. | ಈ ಬಗ್ಗೆ ಮಾತನಾಡಿದ ಪಾಲಿಕೆಯ ವಿದ್ಯುತ್ ವಿಭಾಗದ ಅಭಿಯಂತರರಾದ ಶ್ರೀ ಮಂಜಪ್ಪ ರವರು, ಅರ್ಚಲರಿ ರಸ್ತೆಯಲ್ಲಿ ಬೀದಿ ದೀಪಗಳನ್ನು ಅಳವಡಿಸಲು ಅಗತ್ಯ ಕ್ರಮಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು. | ಶ್ರೀ. ಮಂಜಪ್ಪ ಕಿರಿಯ ಅಭಿಯಂತರರು ವಿದ್ಯುತ್ ವಿಭಾಗ, ಬಿ.ಬಿ.ಎಂ.ಪಿ. 9448320794 |

**ಮಾನ್ಯ ಶಾಸಕರು ವಾರ್ಡಿನಲ್ಲಿ ಎಲ್ಲೆಲ್ಲಿ ಸಾರ್ವಜನಿಕ ಶೌಚಾಲಯಗಳ ಅವಶ್ಯಕತೆ ಇರುತ್ತದೆ ಎಂಬ ಪಟ್ಟಿಯನ್ನು ಮತ್ತು ವಾರ್ಡಿನಲ್ಲಿ ಅಭಿವೃದ್ಧಿಪಡಿಸಬೇಕಾಗಿರುವ ಪಾದಚಾರಿ ಮಾರ್ಗಗಳ (Footpath) ಪಟ್ಟಿಯನ್ನು ಸಲ್ಲಿಸಿದಲ್ಲಿ ಸದರಿ ಕಾಮಗಾರಿಗಳಿಗೆ ಅವಶ್ಯವಿರುವ ಅನುದಾನವನ್ನು ಒದಗಿಸಲಾಗುವುದು ಎಂದು ಸಭೆಯಲ್ಲಿದ್ದ ಸಾರ್ವಜನಿಕರಿಗೆ ಮತ್ತು ಅದಿಕಾರಿಗಳಿಗೆ ತಿಳಿಸಿ, ಪಟ್ಟಿಯನ್ನು ಮುಂದಿನ ವಾರ್ಡ್ ಸಮಿತಿ ಸಭೆಯಲ್ಲಿ ಸಲ್ಲಿಸುವಂತೆ ಸೂಚಿಸಿದರು.**



*Scanned by TapScanner*

ನೋಡಲ್ ಅಧಿಕಾರಿಯವರು ಸಭೆಗೆ ಹಾಜರಾಗಿದ್ದ ಮಾನ್ಯ ಶಾಸಕರಿಗೆ ಮತ್ತು ಸಮಿತಿಯ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 114 ಅಗರಂ
ಬಿ.ಬಿ.ಎಂ.ಪಿ

<u>ಪ್ರತಿಯನ್ನು:</u>

1. ಮಾನ್ಯ ಆಡಳಿತಗಾರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮಾನ್ಯ ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
7. **ಸದರಿ ಸಭೆಯ ನಡಾವಳಿ ಪ್ರತಿಯನ್ನು ಸಭೆಗೆ ಹಾಜರಾಗಿದ್ದ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಕಳುಹಿಸಿಕೊಡುತ್ತಾ, ಸಭೆಯಲ್ಲಿ ಸಾರ್ವಜನಿಕರು ಮತ್ತು ವಾರ್ಡ್ ಸಮಿತಿ ಸದಸ್ಯರುಗಳು ಚರ್ಚಿಸಿದ ವಿಷಯದ ಬಗ್ಗೆ ಹಾಗೂ ಸಮಸ್ಯೆಗಳನ್ನು ಬಗೆಹರಿಸಲು ಕೈಗೊಂಡ ಕ್ರಮಗಳ ಸಂಪೂರ್ಣ ವಿವರವನ್ನು ಲಿಖಿತ ರೂಪದಲ್ಲಿ ಸದಸ್ಯ ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರ ಕಚೇರಿಗೆ ಸಲ್ಲಿಸಲು ಈ ಮೂಲಕ ಎಲ್ಲಾ ಇಲಾಖೆಯ ಅಧಿಕಾರಿಗಳಲ್ಲಿ ಕೋರಿದೆ.**
8. ಕಛೇರಿ ಪ್ರತಿ.

*Scanned by TapScanner*